ರಂಗಭೂಮಿ, ಮಹಿಳಾ ಸಂಘಟನೆ ಕ್ಷೇತ್ರದಲ್ಲಿ ಸಕ್ರಿಯರಾಗಿ ತೊಡಗಿಸಿಕೊಂಡು, ಬರವಣಿಗೆಯನ್ನೂ ನಿರಂತವಾಗಿ ಮಾಡುತ್ತಿರುವ ಮಾಧವಿ ಭಂಡಾರಿ ಕೆರೆಕೋಣ ಉತ್ತರ ಕನ್ನಡ ಜಿಲ್ಲೆಯ ಕೆರೆಕೋಣದವರು. ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಕನ್ನಡ ಉಪನ್ಯಾಸಕಿಯಾಗಿ ಕೆಲಸ ಮಾಡಿ, ಪ್ರಸ್ತುತ ನಿವೃತ್ತರು. 'ಹರಿದ ಸ್ಕರ್ಟಿನ ಹುಡುಗಿ', 'ಕಡಲು ಕಳೆದಿದೆ', 'ಮೌನ ಗರ್ಭದ ಒಡಲು' (ಕವನ ಸಂಕಲನ), 'ನೀನುಂಟು ನಿನ್ನ ರೆಕ್ಕೆ ಉಂಟು' (ಸಂಪಾದಿತ ಮಹಿಳಾ ಕಾವ್ಯ) 'ಪಿಸುದನಿ' (ಲೇಖನ ಸಂಗ್ರಹ)ಅವರ ಪ್ರಮುಖ ಕೃತಿಗಳು.

ನೀನಿಲ್ಲೇ ಕುರ್ಚಿಯಲ್ಲಿ ಕುಳಿತಿರು. ಅಣ್ಣ ಪಾರ್ಕಿಂಗ್ ಲಾಟ್‌ಗೆ ಹೋಗಿ ಕಾರು ತೆಗೆದುಕೊಂಡು ಬರ್ತಾನೆ.'

'ಸಂದೀಪ, ನನಗೇನೂ ಇಲ್ಲ ಎಂದಮೇಲೆ ಮಾತ್ರೆ ಯಾಕೆ ನುಂಗಬೇಕು? ಅಲ್ಲವೇನೋ ಸಂತೋಷ? ನೀನು ಏನು ಹೇಳ್ತಿಯಾ? ನಿಮ್ಮಿಬ್ಬರ ಮದುವೆ ಮಾಡಿಬಿಟ್ಟರೆ ಎಲ್ಲ ಸರಿಹೋಗ್ತದೆ ಅಂತ ಡಾಕ್ಟರ್ ಹೇಳಿದ್ದಾರಲ್ವಾ?'

ಸಂತೋಷನಿಗೆ ಸ್ವಲ್ಪ ಮುಂಗೋಪ ಜಾಸ್ತಿ. ತಾನು ಹೇಳಿದ್ದೇ ಸರಿ ಎನ್ನುವವನು. ಅವರಿಬ್ಬರ ಗಲಾಟೆಗೂ ಅದೇ ಕಾರಣವಾಗಿತ್ತು. ಆದರೆ ಮೊನ್ನೆ ಬೆಳಗಿನ ಜಾವ ಅದು ಸ್ವಲ್ಪ ಜಾಸ್ತಿಯೇ ಆಯತಪ್ಪಿಹೋಗಿತ್ತು.

'ಅಲ್ವೇನೋ ಸಂತೋಷ?' ಎಂದು ಕೇಳಿದ್ದಕ್ಕೆ ಮತ್ತೆ ಪಿತ್ತ ನೆತ್ತಿಗೇರಿದಂತಾದರೂ ಬಾಯಿಗೆ ಬಂದಂತೆ ಒದರಾಡಲು ಅದು ತಕ್ಕ ಸ್ಥಳವಾಗಿರಲಿಲ್ಲ. ಏನೇ ಆದರೂ ಮಾತಿಗೆ ಮಾತು ಬಿಟ್ಟುಕೊಡುವ ಜಾಯಮಾನ ಅವನದಲ್ಲ. ಹಾಗಾಗಿ ಹೇಳಿಯೇಬಿಟ್ಟ, 'ಅಮ್ಮಾ, ಮದುವೆ ಮಾಡಿಕೊಳ್ಳಲಿಕ್ಕೆ ಹೇಳಿದವರು ಜೋಯಿಸರೂ ಅಲ್ಲ, ಪುರೋಹಿತರೂ ಅಲ್ಲ...'

ಬ್ರೋಕರ್ ಕೂಡ ಅಲ್ಲ, ಅಂತ ಸೇರಿಸ್ತಾನೇನೋ ಎಂದು ಕಾದೆ. ಆ ಶಬ್ದ ಅವನ ಬಾಯಲ್ಲಿ ಬರಲಿಲ್ಲ.

'ನಮಗೆ ಬೇಕಾದಾಗ ನಾವು ಮದುವೆ ಆಗ್ತೇವೆ. ನೀನು ಇದನ್ನೆಲ್ಲ ತಲೆಗೆ ಹಚ್ಚಿಕೊಂಡು ಆರೋಗ್ಯ ಹಾಳು ಮಾಡಿಕೊಳ್ಳಬೇಡ. ಎಲ್ಲಕ್ಕಿಂತ ಮೊದಲು ಕಾಲು ಗುಣಮಾಡಿಕೊ. ಇಲ್ಲದೆಹೋದರೆ ಆಯುಷ್ಯಪೂರ್ತಿ ಕುಂಟಿಯಾಗಿಯೇ ಇದ್ದುಬಿಡ್ತೀಯಾ.'

'ಆಯ್ತು ಬಿಡು...' ಮಾತು ಮುಗಿಯುವ ಮೊದಲೇ ಸಂತೋಷ ಮಾರು ದೂರ ಹೋಗಿಯಾಗಿತ್ತು.

'ಅಂದಹಾಗೆ ಸಂದೀಪ, ಇವತ್ತಿನವರೆಗಿನ ಬಿಲ್ ಎಷ್ಟಾಯ್ತು?'

'ನೀನು ಬ್ರೇನ್ ಇಲ್ಲ ಅಂತ ಒಪ್ಪಿಕೊಂಡಿದ್ದೀಯಾ. ಹಾರ್ಟ್ ಇಲ್ಲ ಅಂತ ನಿನಗೆ ಇದುವರೆಗೂ ಯಾರೂ ಹೇಳಿಲ್ಲ. ಹಾಗಾಗಿ ನೀನು ಹೃದಯವಂತೆ. ಕೇವಲ ಎರಡೇ ಎರಡು ದಿನ ಆಸ್ಪತ್ರೆಯಲ್ಲಿ ಮಲಗಿದ್ದಕ್ಕೆ ಬಿಲ್ ಎಷ್ಟಾಯ್ತು ಅಂತ ಗೊತ್ತಾದರೆ ನಿನಗೆ ಹಾರ್ಟ್ ಅಟ್ಯಾಕ್ ಆಗುವುದು ಗ್ಯಾರಂಟಿ. ಮತ್ತೆ ನಿನ್ನನ್ನು ಆಸ್ಪತ್ರೆಗೆ ಸೇರಿಸಲು ಸಾಧ್ಯವಿಲ್ಲ. ನಮಗೆ ಹಿಂದಿರುಗಿ ಹೋಗಲೇಬೇಕು. ಮೆಡಿಸಿನ್ ತೆಗೆದುಕೊಳ್ಳಲೇಬೇಕಾ ಎಂದು ಮತ್ತೆ ಕೇಳಬೇಡ. ತಗೊಂಡು ಮನೆಗೆ ಹೋಗೋಣ. ಎರಡು ದಿನ ಮುಂಜಾನೆಯಿಂದ ಸಂಜೆತನಕ ಇಪ್ಪತ್ತೈದು ಕಡೆ ಅಲೆದು-ಅಲೆದು ತಲೆ ಚಿಟ್ಟು ಹಿಡಿದುಹೋಗಿದೆ' ಕೆಲವೊಮ್ಮೆ ಹೂಂಗುಟ್ಟಿ, ಕೆಲವೊಮ್ಮೆ ತಲೆಯಾಡಿಸಿದೆ. ಏನೋ ನೆನಪಾದವರಂತೆ ಪುನಃ ಹೇಳಿದ, 'ಅಂದಹಾಗೆ ಹದಿನೈದು ದಿನಗಳ ನಂತರ ಡಾಕ್ಟರ್ ಮತ್ತೊಮ್ಮೆ ಬಂದು ತೋರಿಸಲು ಹೇಳಿದ್ದನ್ನು ಮರೆಯಬೇಡ. ಚಿಕ್ಕಮ್ಮನಿಗೆ ಹೇಳಿ ಅವಳನ್ನು ಕರೆದುಕೊಂಡು ಆಸ್ಪತ್ರೆಗೆ ಬಾ. ಬರುವಾಗ ಈ ಫೈಲ್ ತರಬೇಕು. ಇದರಲ್ಲಿದ್ದ ಕಾರ್ಡ್ ಕೌಂಟರ್‌ನಲ್ಲಿ ತೋರಿಸಬೇಕು. ಅಲ್ಲಿದ್ದವರು ಯಾರಾದರೂ ಹೆಲ್ಪ್ ಮಾಡ್ತಾರೆ. ಮನೆಗೆ ಹೋಗಿ ಈ ಎಲ್ಲ ರಿಪೋರ್ಟ್‌ಗಳನ್ನು ಮಾತ್ರೆ ಚೀಟಿಗಳನ್ನು ಫೈಲ್ ಮಾಡಿ ಇಡ್ತೇನೆ.'

ಈಗ ಜೋರಾಗಿ 'ಹೂಂ' ಎಂದೆ. ಕಾರಣವಿಷ್ಟೆ, ಫೈಲ್ ಇಲ್ಲೇ ಇರುವುದರಿಂದ ಎಷ್ಟು ಬಿಲ್ ಆಯಿತೆಂದು ನೋಡಬಹುದಲ್ಲ, ಎಂದು ಮನಸ್ಸಲ್ಲೇ ಮಂಡಿಗೆ ತಿಂದೆ.

ಛೆ! ನಾನೆಂಥ ಪೆದ್ದಿ, ಬೇರೆಲ್ಲವನ್ನೂ ಫೈಲ್ ಮಾಡಿರ್ತಾರೆ ಆದರೆ ಬಿಲ್ ಯಾಕೆ ಅಲ್ಲಿಡ್ತಾರೆ. ಇರಲಿ, ಎರಡುದಿನಗಳ ಮಟ್ಟಿಗಾದರೂ ಅಮ್ಮನಿಗಾಗಿ ಇಬ್ಬರೂ ಲ್ಯಾಪಟಾಪ್ ಮುಚ್ಚಿಟ್ಟರಲ್ಲ, ಅಷ್ಟೇ ಸಾಕು.

●